ಪ್ರಮುಖವಾಗಿ ಈ ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ 1989–91ರದ್ದು ಏತಕ್ಕೆ ಬಾಕಿ ಇದೆ ಮತ್ತು ಇದಕ್ಕೆ ಕಾರಣ ಏನು ಎಂದು ಕೇಳಿದ್ದೇನೆ. ಈ ಬಗ್ಗೆ ಒಂದು ವರ್ಷದ ಹಿಂದೆ ಈ ಸದನದಲ್ಲಿ ಪ್ರಶ್ನೆ ಮಾಡಿದ್ದೆ. ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಸ್ಥಾನದಲ್ಲಿದ್ದಾಗ ಈ ಪ್ರಶ್ನೆ ಕೇಳಿದ್ದೆ. 6 ತಿಂಗಳಲ್ಲಿ ಅದನ್ನು ಮುಗಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಈಗ ಅವರೇ ಉತ್ತರ ಕೊಡುತ್ತಿದ್ದಾರೆ. 1989–91ರದ್ದು ಬಾಕಿ ಇದೆ ಎಂದು. ಸದನದಲ್ಲಿ ಆಶ್ವಾಸನೆ ಕೊಟ್ಟು ಅದನ್ನು ಪರಿಪೂರ್ಣ ಮಾಡುವುದಿಲ್ಲವೆಂದರೆ ಎಷ್ಟು ಸಾರಿ ಸದನದಲ್ಲಿ ಪ್ರಶ್ನೆ ಕೇಳಬೇಕು ? ಒಂದು ಉತ್ತರ ಹೇಳುತ್ತೀರಿ, 8 ಯೋಜನೆಗಳ ವಿದ್ಯುದ್ದೀಕರಣ ಕೆಲಸ ಪ್ರಗತಿಯಲ್ಲಿದೆ ಎಂದು. ಅಂದರೆ 1991ರಿಂದ ಪ್ರಗತಿಯಲ್ಲಿ ಇರಬೇಕೆ ? ಇದರ ಅರ್ಥವೇನು ?

(ಮಧ್ಯೆ ಶ್ರೀಮತಿ ಮೋಟಮ್ಮನವರು ಸ್ವಿಚ್ ಹಾಕದೆ ಮಾತನಾಡಿದರು)

ಒಂದು ನೀರಿನ ಯೋಜನೆಗೆ ಸರ್ಕಾರ 3–4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತದೆ. ಇಷ್ಟು ಹಣ ಖರ್ಚು ಮಾಡಿ ಇಷ್ಟು ವರ್ಷಗಳಾದರೂ ನೀರು ಕೊಡುವುದಿಲ್ಲವೆಂದರೆ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆಯೆ ? ಪ್ರಗತಿ ಅಂದರೆ ಏನು ಅರ್ಥ ? ಯಾವ ಹಂತದಲ್ಲಿದೆ ಎಂದು ಕೇಳಿದ್ದೇನೆ; ಅದಕ್ಕೆ ನಿಖರವಾದ ಉತ್ತರ ಬೇಕು. 1981ರದ್ದು ಒಂದು ಮಾತ್ರ ಸರಿ. ರೈಲ್ವೆ ಇಲಾಖೆಗೆ ಬರೆದಿದ್ದೇವೆ, ಅದಕ್ಕೆ ಉತ್ತರ ಬಂದಿಲ್ಲವೆಂದು ಹೇಳಿದ್ದಾರೆ. ಜವಾಬ್ದಾರಿ ಯಾರದ್ದು ? ಬರೆದು ಸುಮ್ಮನೆ ಕುಳಿತರೆ ಆಗುತ್ತದೆಯೆ ? ಅದನ್ನು ಫಾಲೋಅಪ್ ಮಾಡಿ ಯಾವ ಕಾರಣಕ್ಕೆ ಏನು ಎಂದು ರೈಲ್ವೆ ಇಲಾಖೆಯವರ ಜೊತೆ ಸಂಪರ್ಕ ಮಾಡಿ ಕೊಡಿಸತಕ್ಕ ವ್ಯವಸ್ಥೆಯನ್ನು ಇಲಾಖೆ ಮಾಡಬೇಕೇ ಬೇಡವೇ ಎಂಬುದು ನನ್ನ ಪ್ರಶ್ನೆ.

† ಶ್ರೀ ಎಸ್. ಎಂ. ಕೃಷ್ಣ:– ಇದರಲ್ಲಿ ವಿಳಂಬವಾಗಿದೆ ಎಂಬುದನ್ನು ಒಪ್ಪುತ್ತೇನೆ. ಈಗಾಗಲೇ ಒಂದಕ್ಕೆ ಶ್ರೀಮತಿ ಮೋಟಮ್ಮನವರು ಉತ್ತರಿಸಿದ್ದಾರೆ. ಪ್ರಗತಿ ಅಂದರೆ ಏನು ಎಂಬುದಕ್ಕೆ ಅವರು ವಿಶ್ಲೇಷಣೆ ಮಾಡಿದ್ದಾರೆ. ಇನ್ನೊಂದಕ್ಕೆ ತಾವೇ ಉತ್ತರ ಒದಗಿಸಿಕೊಂಡಿದ್ದೀರಿ. ರೈಲ್ವೆ ಅಥಾರಿಟಿಯವರಿಂದ ಒಪ್ಪಿಗೆ ದೊರೆಯಬೇಕಾಗಿದೆ, ನಿಜ. ನಾವು ಕಾಗದ ಬರೆದು ಕಳುಹಿಸಿದರೆ ಸರ್ಕಾರ ತನ್ನ ಕೆಲಸವನ್ನು ಮಾಡಿತು ಎಂದು ಸಮಾಧಾನದಿಂದ ಕುಳಿತುಕೊಳ್ಳತಕ್ಕದ್ದು ಸಾಧುವಲ್ಲ. ಅದನ್ನು ಫಾಲೋ ಅಪ್ ಮಾಡಬೇಕೆಂಬುದನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಇನ್ನು ಬಾಕಿ ಪ್ರಾಜೆಕ್ಟ್ಸ್ ಏನಿವೆ ಉರುಗಲುವಾಡಿ, ಕಮ್ಮೂರುಗಟ್ಟು, ಹಾಲಗಳ್ಳಿ ಇವುಗಳ ವಿದ್ಯುದ್ದೀಕರಣ ಕೆಲಸ ಪ್ರಗತಿಯಲ್ಲಿದೆ. ಜಾವಗಲ್ ಹೋಬಳಿಯಲ್ಲಿ 6 ಯೋಜನೆಗಳಿವೆ. ತಾವರೆಹಳ್ಳಿ ಯೋಜನೆ ಪ್ರಗತಿಯಲ್ಲಿದೆ. ಕೋಳಗುಂದ, ಗೊಲ್ಲರಹಟ್ಟಿ ಯೋಜನೆಗಳಿಗೆ ಡಿಸೆಂಬರ್ 1992ರಲ್ಲಿ ಪವರ್ ಮಂಜೂರಾತಿ ನೀಡಿದ್ದು, ಜಿಲ್ಲಾಪರಿಷತ್ತು ಮತ್ತು ಮಂಡಲಪಂಚಾಯಿತಿಗಳು ಇದುವರೆಗೆ ಮಂಡಲಿಯ ನಿಯಮವನ್ನು ಪಾಲಿಸಿಲ್ಲ. ಆದುದರಿಂದ ಆದೇಶವನ್ನು ನೀಡಿಲ್ಲ. ಜಿಲ್ಲಾ ಪರಿಷತ್ತಿನವರು ಮತ್ತು ಮಂಡಲ ಪಂಚಾಯಿತಿಯವರು ತಮ್ಮದೇ ಆದ ಕಂಟ್ರಾಕ್ಟುಯಲ್ ಆಬ್ಲಿಗೇಷನ್ ಏನಿದೆ ಅದನ್ನು ಮಾಡಬೇಕು. ಅದನ್ನು ಮಾಡದೆ ಇರುವುದರಿಂದ ಸ್ವಲ್ಪ ತಡವಾಗಿದೆ.

ಅದನ್ನು ನಾವು ಮುಖ್ಯ ಕಾರ್ಯದರ್ಶಿಗಳು ಅಥವಾ ಅಡ್ಮಿನಿಸ್ಟ್ರೇಟರ್ಸ್ ಜೊತೆ ತೆಗೆದುಕೊಳ್ಳುತ್ತೇವೆ. ಶಿರಗಟ್ಟಗೆರೆ, ತಿರುಪತಿಹಳ್ಳಿ, ನಾಗೇನಹಳ್ಳಿ, ದೇಶಾನಿ – ಇವುಗಳ ಎಲ್ಲಾ ಕೆಲಸ ನಡೆಯುತ್ತಿದೆ. ಒಟ್ಟಿನಲ್ಲಿ ಮಾನ್ಯ ಸದಸ್ಯರ ಕಳಕಳಿ ಇಷ್ಟು ನಿಧಾನ ಆಗಬಾರದು, ತ್ವರಿತ ಗತಿಯಲ್ಲಿ ಮುಗಿಸಬೇಕೆನ್ನುವುದು. ಹಿಂದೆ 6 ತಿಂಗಳು ಟೈಮ್ ಕೇಳಿದ್ದರು. ನಾನು ಕೊಟ್ಟಿದ್ದೆ ಎಂದು ಹೇಳಿದ್ದೀರಿ. ನನಗೆ ಸ್ವಲ್ಪ ಅವಕಾಶ ಕೊಡಿ. ಇದನ್ನು ನಾನು ಪರಿಹಾರ ಮಾಡುತ್ತೇನೆ.

ಶ್ರೀ ಬಿ. ಶಿವರಾಮು:– ಮಾನ್ಯ ಅಧ್ಯಕ್ಷರೇ, ರೈಲ್ವೆ ಇಲಾಖೆಯದು 1989ರದ್ದು. ಅದನ್ನೇ

ಪ್ರಮುಖವಾಗಿ ಲಾಸ್ಟ್ ಟೈಮ್ ಕೇಳಿದ್ದೆ. ಈ ಸದನದಲ್ಲಿ ಆಶ್ವಾಸನೆ ಕೊಟ್ಟರೂ ಕೆಲಸ ಆಗುವುದಿಲ್ಲ ಎಂದರೆ ಈ ಸದನಕ್ಕೆ ಬೆಲೆ ಇದೆಯೇ ? ತಾವು ಈ ಸ್ಥಾನದಲ್ಲಿ ಇದ್ದೀರಿ. ಅದೇ ಸ್ಥಾನದಿಂದ 6 ತಿಂಗಳ ಒಳಗೆ ಕೆಲಸ ಮಾಡಿಸುತ್ತೇನೆಂದು ಮಂತ್ರಿಗಳಿಂದ ಉತ್ತರ ಕೊಡಿಸಿದ ಮೇಲೆ ಮತ್ತೆ 1989–91ರ ಕೆಲಸ ಆಗಿಲ್ಲ ಎಂದರೆ ಪ್ರಗತಿ ಎಂದರೆ ಅರ್ಥ ಏನು ? ಇಲಾಖೆಯಲ್ಲಿ ಅದಕ್ಕೆ ಯಾವ ಅರ್ಥ ಇಟ್ಟುಕೊಂಡಿದ್ದಾರೆ ? ಈ ಸದನಕ್ಕೆ ಬೆಲೆ ಇದೆಯೇ ? ಇದ್ದರೆ, ಕೊಟ್ಟರೆ ಕೆಲಸ ನಿರ್ವಹಣೆ ಮಾಡುವುದಕ್ಕೆ ಎಷ್ಟು ಟೈಮ್ ಕೊಡುತ್ತೀರಿ ? ಮೂರನೆಯದು, ಈ ಇಲಾಖೆಯಲ್ಲಿ ಟೈಮ್‌ಬೌಂಡ್ ವರ್ಕ್ ಮಾಡುವುದಕ್ಕೆ ಆಗುತ್ತದೆಯೇ ? ಜಿಲ್ಲಾಪರಿಷತ್ತು ಕೆಲಸ ಮುಗಿಸಿದ ಮೇಲೆ ಒಂದು ವರ್ಷದ ಒಳಗೆ ನಾವು ಕೊಟ್ಟೇ ಕೊಡುತ್ತೇವೆ ಎನ್ನುವ ಟೈಮ್‌ಬೌಂಡ್ ಪ್ಲಾನ್ ಹಾಕಿ ಕೆಲಸ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ:– ಟೈಮ್‌ಬೌಂಡ್ ಪ್ರೋಗ್ರಾಮ್ ಹಾಕುವುದಕ್ಕೆ ವಿದ್ಯುತ್ ಇಲಾಖೆಗೆ ಏನೂ ತೊಂದರೆ ಇಲ್ಲ. ಆದರೆ ಟೈಮ್‌ಬೌಂಡ್ ಪ್ರೋಗ್ರಾಮ್ ಹಾಕಬೇಕಾದರೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತುಗಳಿಂದ ನಮಗೆ ಸಹಕಾರಬೇಕಾಗುತ್ತದೆ. ಉದಾಹರಣೆಗೆ ಹಾರ್ನಳ್ಳಿ... ಮಾನ್ಯ ಮಂತ್ರಿಗಳ ಊರಾ ?... ಆ ಊರಿನ ಬಗ್ಗೆ ಅಂದಾಜುಪಟ್ಟಿ ತಯಾರಾಗಿದೆ. ಠೇವಣಿ ಹಣದ ಬಗ್ಗೆ ತಿಳುವಳಿಕೆ ಪತ್ರವನ್ನು ಸಂಬಂಧಪಟ್ಟ ಜಿಲ್ಲಾಪರಿಷತ್ತು, ಮಂಡಲಪಂಚಾಯಿತಿಗೆ ನೀಡಲಾಗುತ್ತಿದೆ ಎಂದು ನಮ್ಮ ಇಲಾಖೆಯವರು ಹೇಳುತ್ತಾರೆ. "ಠೇವಣಿ ಹಣ ನೀಡುವಂತೆ ತಮ್ಮ ಊರಿಗೆ ಜನವರಿ 93ರಲ್ಲಿ ಸಂಬಂಧಪಟ್ಟ ಜಿಲ್ಲಾಪರಿಷತ್ತಿಗೆ, ಮಂಡಲ ಪಂಚಾಯಿತಿಗೆ ತಿಳುವಳಿಕೆ ಪತ್ರ ನೀಡಲಾಗಿದೆ. ಇದುವರೆವಿಗೂ ಠೇವಣಿ ಹಣ..."

ಶ್ರೀ ಬಿ. ಶಿವರಾಮು:– ಪ್ರಗತಿ ಎಂದರೆ ಏನು ಅರ್ಥ ? 1989ರಿಂದ ಪ್ರಗತಿಯೇ ? ಇದಕ್ಕೆ ಒಂದು ಸಕಾರಣ ಬೇಕಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ:– ಇದು ಅಂತಿಮ ಘಟ್ಟದಲ್ಲಿದೆ, ಕೆಲವೇ ದಿನಗಳ ಅವಕಾಶ ಕೊಡಿ. ತಿಂಗಳು ಎಂದು ಹೇಳುತ್ತಿಲ್ಲ, ಕೆಲವೇ ದಿನಗಳಲ್ಲಿ ಮಾಯಸಂದ್ರದ್ದು ಪೂರ್ಣ ಮಾಡಿ ಕೊಡುತ್ತೇವೆ.

ವಿದ್ಯುತ್ ಬಳಕೆದಾರರಿಂದ ಬರಬೇಕಾದ ಬಾಕಿ ಹಣ

368 (131): ಶ್ರೀ ಕೆ.ವಿ. ರವೀಂದ್ರನಾಥ್ ಬಾಬು (ಕೊಟ್ಟೂರು):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿದ್ಯುಚ್ಛಕ್ತಿ ಶುಲ್ಕ ಸಂಬಂಧವಾಗಿ ಬಳಕೆದಾರರಿಂದ ಬರಬೇಕಾಗಿರುವ ಒಟ್ಟು ಬಾಕಿ;

ಆ) ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಬಾಕಿ ಉಳಿಸಿಕೊಂಡಿರುವ ಬಳಕೆದಾರರುಗಳ ಸಂಖ್ಯೆ (ವ್ಯಕ್ತಿಗಳ ಅಥವಾ ಸಂಸ್ಥೆಗಳ ಹೆಸರುಗಳನ್ನು ಒದಗಿಸತಕ್ಕದ್ದು) ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) 1992ರ ಸೆಪ್ಟೆಂಬರ್ ಅಂತ್ಯದವರೆಗೆ ಬರಬೇಕಾಗಿರುವ ಒಟ್ಟು ಬಾಕಿ 506.44 ಕೋಟಿ ರೂಪಾಯಿಗಳು.

ಆ) ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಬಾಕಿ ಉಳಿಸಿಕೊಂಡಿರುವ ಬಳಕೆದಾರರ ಸಂಖ್ಯೆ 571. ಅನುಬಂಧದಲ್ಲಿ ವಿವರಗಳನ್ನು ಒದಗಿಸಲಾಗಿದೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೇ, total amount as at the end

of September 1992 is Rs. 506 crores; power dues ಎಂದು ಕೊಟ್ಟಿದ್ದಾರೆ. ಇದರಲ್ಲಿ 1 ಲಕ್ಷಕ್ಕಿಂತ ಮೇಲೆ ಇರತಕ್ಕ ಪಾರ್ಟೀಸ್ 571 ಎಂದು ಹೇಳಿದ್ದಾರೆ. ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳು ಸರಿ ಇವೆಯೋ ? ಏಕೆಂದರೆ, ಲೇಟೆಸ್ಟ್ ಸ್ಟೇಟ್‌ಮೆಂಟ್ ಒಂದು ಇದೆ. ಅದರ ಪ್ರಕಾರ ಸ್ಕೇರ್ ಕಂಪೆನಿ, ಬಳ್ಳಾರಿ ಇವರು ನಾವು ಬಾಕಿದಾರರು ಅಲ್ಲ ಎಂದು ಹೇಳಿದ್ದಾರೆ. ಉಪಯೋಗಿಸಿದ ವಿದ್ಯುತ್‌ಗೆ ಹಣ ಕೊಟ್ಟಿದ್ದೇವೆ, ನಮ್ಮ ವಿಚಾರ ಕೋರ್ಟ್‌ನಲ್ಲಿ ಇದೆ ಎಂದು ಹೇಳಿದ್ದಾರೆ. ಆದರೆ ಇವರ ಬಗ್ಗೆ ಸುಮಾರು 12 ಕೋಟಿ ರೂಪಾಯಿ ಬಾಕಿ ಬರಬೇಕು ಎಂದು ತಮ್ಮ ಲಿಸ್ಟ್‌ನಲ್ಲಿ ಇದೆ. ಇದರಲ್ಲಿ ಯಾವುದು ಸರಿ ?

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಸದಸ್ಯರು ಕೇಳುತ್ತಿರುವ ಕೈಗಾರಿಕಾ ಘಟಕದ ಪ್ರಶ್ನೆ ಹೈಕೋರ್ಟ್‌ನಲ್ಲಿ ಇದೆ. ಹೈಕೋರ್ಟ್‌ನಲ್ಲಿ ತೀರ್ಮಾನ ಅವರ ಪರವಾಗಿದೆ. ಅದಕ್ಕೆ ನಾವು ವಿದ್ಯುತ್ ಮಂಡಲಿಯವರು ಪ್ರಶ್ನೆ ಮಾಡುತ್ತಿದ್ದೇವೆ. ಬಡ್ಡಿ ಮತ್ತು ಬಡ್ಡಿ ಮೇಲಿನ ಸುಸ್ತಿ ಬಡ್ಡಿ ಹಾಕುತ್ತಿರುವುದರ ಬಗ್ಗೆ ಜಿಜ್ಞಾಸೆ ಹೆಚ್ಚಾಗಿದೆ ಎನ್ನುವುದು ತಮಗೆ ಮೊದಲೇ ತಿಳಿದಿದೆ. ಈ ಜಿಜ್ಞಾಸೆಯಲ್ಲಿ 7 ಕೋಟಿ ರೂಪಾಯಿ ಎಂದು ನಾವು ಹೇಳುತ್ತೇವೆ. ಹಾಗೂ ಒಟ್ಟು 11 ಕೋಟಿ ರೂಪಾಯಿ ಆಗುತ್ತದೆ. ಅವರು ಏನೂ ಕೊಡಬೇಕಾಗಿಲ್ಲ ಎಂದು ಹೇಳುತ್ತಿದ್ದಾರೆ. ಆದುದರಿಂದ ಕೋರ್ಟ್‌ನವರು ಏನು ತೀರ್ಮಾನ ಕೊಡುತ್ತಾರೋ ಅದು ಅವರ ಮೇಲೆ ನಮ್ಮ ಮೇಲೆ ಬೈಂಡಿಂಗ್ ಇದೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೇ, ಇನ್ನೂ ಕೆಲವು ಪಾರ್ಟೀಸ್ ಇದ್ದಾರೆ. ಗೌರ್ನಮೆಂಟ್ ಪಾರ್ಟೀಸ್‌ನಿಂದ ಕೋಟಗಟ್ಟಲೆ ಡ್ಯೂ ಇದೆ. ಲಿಸ್ಟ್ ತಮಗೆ ಕಳುಹಿಸಿಕೊಡುತ್ತೇನೆ. ಸರ್ಕಾರದ್ದೇ ಡ್ಯೂ ಇದೆ. ಅವರೂ ಏಕೆ ಕೊಡುತ್ತಿಲ್ಲ ? ಅದೇ ಬಡವ ಹಣ ಕಟ್ಟದಿದ್ದರೆ ಪವರ್ ಕಟ್ ಮಾಡುತ್ತೀರಿ, ಫ್ಯೂಸ್ ತೆಗೆಯುತ್ತೀರಿ. ಇವರಿಗೆ ಏಕೆ ಡಿಸ್‌ಕನೆಕ್ಟ್ ಮಾಡುವುದಿಲ್ಲ ? 1 ಲಕ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಪ್ರೈವೇಟ್ ಪಾರ್ಟೀಸ್‌ದು 571 ಕೇಸ್‌ಗಳು ಇವೆ. ಇವರಿಗೆ ಏಕೆ ಡಿಸ್‌ಕನೆಕ್ಟ್ ಮಾಡುವುದಿಲ್ಲ ? ಇವರಿಗೆ ಡಿಸ್‌ಕನೆಕ್ಟ್ ಮಾಡಿದರೆ ರೈತರಿಗೆ ಆ ಪವರ್ ಕೊಡಲು ಅನುಕೂಲವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ:– ರೈತರ ಪಂಪುಸೆಟ್ಟಿಗೆ ನಾವು ಡಿಸ್‌ಕನೆಕ್ಟ್ ಮಾಡತಕ್ಕ ಪರಿಸ್ಥಿತಿ ಇಲ್ಲ. ಏಕೆಂದರೆ 9 ಲಕ್ಷ ಪಂಪುಸೆಟ್ಟುಗಳಲ್ಲಿ ಸುಮಾರು 13ರಿಂದ 15 ಸಾವಿರ ಮಾತ್ರ 10 ಅಶ್ವಶಕ್ತಿಗೂ ಮೀರಿದ ವಿದ್ಯುತ್ ಬಳಕೆ ಮಾಡುತ್ತಿದ್ದಾರೆ. ಮಿಕ್ಕ ಎಂಟೂವರೆ ಲಕ್ಷ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಮಂಡಳಿಗೆ ರೈತರು ಹಣವನ್ನು ಕೊಡಬೇಕಾಗಿಲ್ಲ. ಅದನ್ನು ಸರ್ಕಾರವೇ ಸಬ್ಸಿಡಿ ರೂಪದಲ್ಲಿ ಮಂಡಲಿಗೆ ಪೂರೈಕೆ ಮಾಡುತ್ತದೆ. ಒಟ್ಟಿನಲ್ಲಿ ಸದನದಲ್ಲಿ ಆಶ್ವಾಸನೆ ಕೊಡುವುದು ಏನೆಂದರೆ ಅದಷ್ಟು ಜಾಗ್ರತೆ 506....

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಒಂದು ಸಣ್ಣ ಸಲಹೆ. ಇಂಟರೆಸ್ಟ್ ಹಾಗೂ ಪೀನಲ್ ಇಂಟರೆಸ್ಟ್‌ಗೆ ಸಂಬಂಧಪಟ್ಟ ಹಾಗೆ ಗೊಂದಲ ಇದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. Why don't you ask them to bifurcate principal amount due to us and separate the interest and penal interest and see that the principal amount is recovered as early as possible.

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಸದಸ್ಯರಿಗೆ ನಾನು ಆಭಾರಿಯಾಗಿದ್ದೇನೆ. ಅವರು ಉತ್ತಮ ಸಲಹೆ ಕೊಟ್ಟಿದ್ದಾರೆ. ನಾವು ನಮ್ಮ ಅಡ್ವೊಕೇಟ್ಸ್‌ಗೆ ತಿಳಿಸಿ ಕೋರ್ಟ್‌ನಲ್ಲಿ ಈ ಪ್ರಶ್ನೆಗಳು ಬಂದಾಗ ಅಟ್‌ಲೀಸ್ಟ್ ಪ್ರಿನ್ಸಿಪಲ್ ಅಮೌಂಟ್ ಏನಿದೆ ಅದನ್ನು ಕಟ್ಟಿ ಆನಂತರ ಆರಾಮವಾಗಿ ನಾವು ಬಡ್ಡಿ, ಸುಸ್ತಿ ಬಡ್ಡಿ ಬಗ್ಗೆ ವ್ಯಾಜ್ಯ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿ ಇದನ್ನು ಬಲವಾಗಿ ನಾವು

ಪ್ರತಿಪಾದನೆ ಮಾಡುವುದಕ್ಕೆ ಕರ್ನಾಟಕ ವಿದ್ಯುತ್ ಮಂಡಲಿ ಪರವಾಗಿ ಅಡ್ವೊಕೇಟ್ಸ್ ಕೋರ್ಟ್‌ಗೆ ಯಾರು ಅಪಿಯರ್ ಆಗುತ್ತಾರೋ ಅವರಿಗೆ ಇವತ್ತೇ ನಾನು ನಿರ್ದೇಶನ ಕೊಡುತ್ತೇನೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೇ, ಮಾನ್ಯ.....

ಅಧ್ಯಕ್ಷರು:– ಈಗ ಮುಂದಿನ ಪ್ರಶ್ನೆ. ಇದೇ ವಿಚಾರದ ಬಗ್ಗೆ ರಾಯರೆಡ್ಡಿಯವರು, ಇನ್ನೂ ಅನೇಕರು ಕೇಳಿದ್ದಾರೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಉಳಿದವರಿಂದಲೂ ಕಲೆಕ್ಟ್ ಮಾಡುತ್ತಾರೆಯೇ ? ಅಥವಾ ಅವರೂ ಕೋರ್ಟ್‌ಗೆ ಹೋಗುವವರೆಗೆ ಕಾಯುತ್ತಾರೋ ?

ಶ್ರೀ ಎಸ್. ಎಂ. ಕೃಷ್ಣ:– ಇಲ್ಲಿ ಸ್ಪೆಷಲ್ ಕೋರ್ಟ್ ದೊಡ್ಡ ದೊಡ್ಡ ಕುಳಗಳು. ಆದರೆ 1 ಲಕ್ಷ ಹಾಗೂ ಅದರ ಮೇಲೆ ಇರುವವರು ಮುನ್ಸೀಫ್ ಕೋರ್ಟ್‌ಗೆ ಹೋಗಿರುತ್ತಾರೆ. ಸಿವಿಲ್ ಜಡ್ಜ್ ಕೋರ್ಟ್‌ಗೆ ಹೋಗಿರುತ್ತಾರೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಹೋಗಿರುತ್ತಾರೆ. ಆದುದರಿಂದ ನಮ್ಮ ವಿದ್ಯುತ್ ಮಂಡಲಿಗೆ ನಾವು ಏನು ಮಾಡ್ರನೈಸೇಷನ್ ಪ್ರೋಗ್ರಾಮ್ ಕೈಗೆ ತೆಗೆದುಕೊಂಡಿದ್ದೇವೆ ಅದನ್ನು ನಿರ್ವಹಿಸುವುದಕ್ಕೆ ಅತಿ ಅಗತ್ಯವಾಗಿ ಹಣ ಬೇಕಾಗಿದೆ. ಆದುದರಿಂದ ಮಾನ್ಯ ಸದಸ್ಯರ ಕಾಳಜಿ ಏನಿದೆ, ಬರಬೇಕಾಗಿರತಕ್ಕ 500 ಕೋಟಿ ಚಿಲ್ಲರೆ ಬಾಕಿ ವಸೂಲಿ ಮಾಡಬೇಕೆನ್ನತಕ್ಕದ್ದು ಅದು ನಮಗೆ ಇನ್ನೂ ಹೆಚ್ಚು ಕಾಳಜಿ ಇದೆ. ನಾವು ದೊಡ್ಡ ಗಾತ್ರದಲ್ಲಿ ಮಾಡ್ರನೈಸೇಷನ್ ಪ್ರೋಗ್ರಾಮ್ ಈ ವರ್ಷ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರ ಸಲಹೆ ಸೂಚನೆಗಳು ಏನೇನು ಇವೆ ಅವುಗಳನ್ನು ಅನುಷ್ಠಾನಕ್ಕೆ ತಂದು ಆದಷ್ಟು ಬೇಗ ಇವುಗಳನ್ನು ಫೈಸಲ್ ಮಾಡುವುದಕ್ಕೆ ಸೂಚನೆ ಕೊಡುತ್ತೇವೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಆಯವ್ಯಯದಲ್ಲಿ ನಿಗದಿಯಾದ ಹಣ

369 (1130): ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಾಪುರ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರದವರು ಆಯವ್ಯಯದಲ್ಲಿ ನಿಗದಿಪಡಿಸಲಾಗಿರುವ ಹಣ ಎಷ್ಟು ?

ಆ) ಆ ಪೈಕಿ ಸರ್ಕಾರದವರು ಇದುವರೆವಿಗೂ ಬಿಡುಗಡೆ ಮಾಡಿರುವ ಹಣವೆಷ್ಟು ?

ಇ) ಬಿಡುಗಡೆಯಾದ ಹಣದ ಪೈಕಿ ವೆಚ್ಚವಾಗಿರುವ ಹಣ ಎಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) 155 ಕೋಟಿ ರೂ.ಗಳು

ಆ) ಕಾಮಗಾರಿಗಳಿಗಾಗಿ ಜನವರಿ 1993ರ ಕೊನೆಯವರೆಗೆ 51.98 ಕೋಟಿ ರೂ.ಗಳ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗಿದೆ.

ಇ) ಭರವಸೆ ಪತ್ರದ ಮೂಲಕ ಬಿಡುಗಡೆ ಮಾಡಲಾದ ಹಣದಲ್ಲಿ ಜನವರಿ 1993ರ ಕೊನೆಯವರೆಗೆ ಕಾಮಗಾರಿಗಳಿಗಾಗಿ 50.65 ಕೋಟಿ ರೂ.ಗಳು ವೆಚ್ಚವಾಗಿದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಮಾನ್ಯ ಅಧ್ಯಕ್ಷರೇ, 1992–93ನೇ ಸಾಲಿನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ 155 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ನಿಗದಿ